ಸರಬರಾಜು ಮಾಡಲಾಗಿರುತ್ತದೆ. ಶಾಲೆಗಳು ಮಕ್ಕಳ ಸಂಖ್ಯೆಗಳಿಗನುಗುಣವಾಗಿ ಎ, ಬಿ, ಸಿ ಎಂದು ವರ್ಗೀಕರಿಸಿದ್ದು 5 ವರ್ಷದ ಈ ಯೋಜನೆಗೆ ಪ್ರತಿ ಶಾಲೆಗೆ ಈ ಕೆಳಕಂಡ ಹಣ ವೆಚ್ಚ ಮಾಡಲಾಗುತ್ತದೆ.

1) ಕ್ಯಾಟಗರಿ ಎ - ರೂ.14.69 ಲಕ್ಷ
(150 ರವರೆಗೆ ವಿದ್ಯಾರ್ಥಿಗಳಿರುವ ಶಾಲೆಗಳು)

2) ಕ್ಯಾಟಗರಿ ಬಿ - ರೂ.19.10 ಲಕ್ಷ

(151 ರಿಂದ 250 ರವರೆಗೆ ವಿದ್ಯಾರ್ಥಿಗಳಿರುವ ಶಾಲೆಗಳು)

3) ಕ್ಯಾಟಗರಿ ಸಿ - ರೂ. 24.20 ಲಕ್ಷ
(250 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಶಾಲೆಗಳು)

ಅ) 850 ವಿದ್ಯಾರ್ಥಿಗಳಿರುವ ಪ್ರತಿ ಸರ್ಕಾರಿ ಪ್ರೌಢಶಾಲೆಗೆ ಒಟ್ಟು 1 ಸರ್ವರ್ ಮತ್ತು 14 ವರ್ಕ್ಸ್ ಸ್ಟೇಷನ್‌ಗಳನ್ನು ಒದಗಿಸುಲಾಗುತ್ತದೆ. ಪ್ರತೀ ಶಾಲೆಗೆ ಇಬ್ಬರು ಕಂಪ್ಯೂಟರ್ ತರಬೇತುದಾರರನ್ನು ನೇಮಿಸಲಾಗುತ್ತದೆ.

ಇ) ಬಾಲ್ಕಿ ನಿಯಮಗಳಡಿಯಲ್ಲಿ ಅವಕಾಶವಿರುವುದಿಲ್ಲ.

ಬೈಂದೂರಿನಲ್ಲಿ ಶಿಕ್ಷಣಾಧಿಕಾರಿಗಳು ಕಛೇರಿಗೆ ಸಿಬ್ಬಂದಿ ನೇಮಕಾತಿ.

2530 (2980) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) :— ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೈಂದೂರು ವಿಧಾನಸಭಾ ಕ್ಷೇತ್ರಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಮಂಜೂರಾಗಿ ಪ್ರಾರಂಭಗೊಂಡಿದ್ದು ಇದಕ್ಕೆ ಸರಿಯಾದ ಸಿಬ್ಬಂದಿಗಳ ನೇಮಕಾತಿಯಾಗಿಲ್ಲದಿರುವುದಕ್ಕೆ ಕಾರಣವೇನು;

ಆ) ಹಾಗಿದ್ದಲ್ಲಿ ಸಿಬ್ಬಂದಿಗಳ ನೇಮಕಾತಿಯನ್ನು ಕೂಡಲೇ ಮಾಡಲಾಗುವುದೆ? ತೊಡಕುಗಳಿದ್ದಲ್ಲಿ ನಿಯೋಜನೆ ಮೂಲಕವಾದರೂ ಹುದ್ದೆಗಳನ್ನು ಭರ್ತಿಮಾಡಲಾಗುವುದೇ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಬೈಂದೂರು ವಿಧಾನಸಭಾ ಕ್ಷೇತ್ರದಲ್ಲಿ ಹೊಸದಾಗಿ ಬಿ.ಇ.ಓ. ಕಛೇರಿ ಪ್ರಾರಂಭವಾಗಿದ್ದು, ಈ ಕೆಳಕಂಡಂತೆ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ.

	ಮಂಜೂರಾಗಿರುವ ಹುದ್ದೆಗಳು	ಹಾಲಿ ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ	ಖಾಲಿ ಹುದ್ದೆಗಳು
1) ಕ್ಷೇತ್ರ ಶಿಕ್ಷಣಾಧಿಕಾರಿ	- 1	1	-
2) ಶಿಕ್ಷಣ ಸಂಯೋಜಕರು	- 5	4	1
3) ಅಧೀಕ್ಷಕರು	- 1	-	1
4) ಪ್ರ.ದ.ಸ.ರು	- 3	1	2
5) ದ್ವಿ.ದ.ಸ.ರು	- 2	1	1
6) ದ್ವಿ.ದಸ ಸಹಿತ ಬೆರಳಚ್ಚುಗಾರರು	- 1	-	1
7) ಡಿ-ದರ್ಜೆ	- 2	1	1

ಅ) ಈ ಹುದ್ದೆಗಳಲ್ಲದೆ ಇಬ್ಬರು ಪ್ರ.ದ.ಸ.ರು ಮತ್ತು ಒಬ್ಬರು ಗ್ರೂಪ್ ಡಿ ನೌಕರರು ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಖಾಲಿ ಇರುವ ಹುದ್ದೆಗಳನ್ನು ಶೀಘ್ರದಲ್ಲಿಯೇ ತುಂಬಲು ಕ್ರಮ ತೆಗೆದುಕೊಳ್ಳಲಾಗುವುದು.

ಭೈಂದೂರಿನಲ್ಲಿ ಸಮುದಾಯ ಆರೋಗ್ಯ ಕೇಂದ್ರ ಮಂಜೂರಾತಿ

2531(2961) ಶ್ರೀ ಗೋಪಾಲ ಪೂಜಾರಿ ಕೆ. (ಕಾರ್ಕಳ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಈ ಹಿಂದೆ 1994-95ನೇ ಇಸವಿಯಲ್ಲಿ ಕುಂದಾಪುರ ತಾಲ್ಲೂಕು ಉಡುಪಿ ಜಿಲ್ಲೆ ಭೈಂದೂರಿಗೆ ಸಮುದಾಯ ಆರೋಗ್ಯ ಕೇಂದ್ರ ಮಂಜೂರಾಗಿರುವುದು ನಿಜವೇ;

ಆ) ಹಾಗಿದ್ದಲ್ಲಿ ಅದು ಕಾರ್ಯರೂಪಕ್ಕೆ ಬರದಿರಲು ಕಾರಣಗಳೇನು;

ಇ) ಅತೀ ಅವಶ್ಯಕವಾಗಿರುವ ಈ ಸಮುದಾಯ ಆರೋಗ್ಯ ಕೇಂದ್ರ ಸ್ಥಾಪಿಸಲು ಏನಾದರೂ ತೊಡಕುಗಳಿವೆಯೇ;

ಈ) ತೊಡಕುಗಳಿದ್ದಲ್ಲಿ ಪರಿಹರಿಸಿ ಮಂಜೂರಾತಿ ನೀಡಬಹುದೇ?

ಶ್ರೀ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಹೌದು.